ಶ್ರೀ ಕೆ. ವೆಂಕಟರಾಮಯ್ಯ.—ನಾನು ಅಧಿಕಾರಿಗಳಿಗೆ ಇಂಥವರು ಏರಿಗಳನ್ನು ಹಾಕಿಕೊಂಡಿದ್ದಾರೆ ಎಂದು ತಿಳಿಸಿದ ಮೇಲೆ ನೋಟೀಸುಗಳನ್ನು ಅವರಿಗೆ ಕೊಟ್ಟಿದ್ದಾರೆ ಇದಕ್ಕೂ ಮುಂಚೆ ಆಗಿರುವ ಕೇಸುಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಸರ್ಕಾರಕ್ಕೆ ಸಹಾಯ ಮಾಡಿದ್ದಾರೆ. ಮತ್ತು ಮಾನ್ಯಸದಸ್ಯರು ಯಾವ ವಿಚಾರವನ್ನು ವಿಚಾರ ಮಾಡಬೇಕು ಎಂದು ತಿಳಿಸಿದ್ದಾರೋ ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಕೆ. ವೆಂಕಟರಾಮಯ್ಯ.—ನನ್ನ ಕೊನೆಯ ಪ್ರಶ್ನೆಗೆ ಉತ್ತರವಾಗಿ ೧೩೦ ಎಂದು ತಿಳಿಸಿದ್ದೀರಿ, ಇದು ಎಕರೆಯೋ. ಅಥವಾ ಏನು ಎಂದು ತಿಳಿಸುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—೧೩೦ ಕೇಸುಗಳಲ್ಲಿ ನಮ್ಮ ಅಧಿಕಾರಿಗಳು ಸ್ಥಳ ತನಿಖೆಮಾಯಿಸಿ ಮಾಡಿಕೊಂಡು ಬಂದಿದ್ದಾರೆ. ಮತ್ತು ಅವರಿಗೆ ಜಮೀನು ಹಂಚಿದ್ದಾರೆ.

ಶ್ರೀ ಕೆ. ಯಂಕಟಪ್ಪ.—೧೩೦ ಪ್ರಕರಣಗಳಲ್ಲಿ ಅಧಿಕಾರಿಗಳು ಸ್ಥಳ ಅಷಮಾಯಿಷಿ ಮಾಡಿ ಭೂಮಿಯನ್ನು ಹಂಚಲಾಗಿದೆ ಎಂದು ತಿಳಿಸಿದ್ದೀರಿ. ಇದರಲ್ಲಿ ೧೦೮೩ ಎಕರೆ ಭೂಮಿಯನ್ನು ಕೊಡಲಾಗಿದೆ. ಇವುಗಳಲ್ಲಿ ಭೂಮಿ ಇದ್ದವರಿಗೆ ಭೂಮಿ ಕೊಟ್ಟಿರತಕ್ಕ ಪಟ್ಟಿ ಏನಾದರೂ ಇದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಭೂಮಿಯನ್ನು ಮುಂಜೂರು ಮಾಡತಕ್ಕದ್ದು ಭೂಮಿ ಇಲ್ಲದವರಿಗೆ ಮಾತ್ರ ಜಮೀನು ಇದ್ದವರಿಗೆ ಸರ್ಕಾರದವರು ಜಮೀನನ್ನು ಕೊಡುವುದಿಲ್ಲ.

ಶ್ರೀ ಕೆ. ಎಂ, ತಮ್ಮಯ್ಯ,—ಜಮೀನು ಇಲ್ಲದವರಿಗೆ ಜಮೀನು ಕೊಡಬೇಕು ಎನ್ನುವುದು ಸರ್ಕಾರದ ಕಾನೂನು. ಸುಮಾರು ೭೦ ಪರ್ಸೆಂಟ್ ಜಮೀನು ಇದ್ದವರಿಗೆ ಜಮೀನು ಹಂಚಿಕೆಯಾಗಿರುವುದು ಸರ್ಕಾರದ ಗಮನಕ್ಕೆ ತಂದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ? ಮತ್ತು ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ,—ಹಾಗೆ ಏನಾದರೂ ನಿದರ್ಶನಗಳನ್ನು ಮಾನ್ಯಸದಸ್ಯರು ನಮಗೆ ಕೊಟ್ಟರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

## Agreement by Bangalore City Corporation to sanction pension to its Workers.

723. SRI I. P. D. SALAPPA (Binnypet).—Will the Minister for Municipal Administration be plased to state :—

(*a*) whether the Government is aware that the Corporation of Bangalore had entered into an agreement with the workers in 1971 that the pension would be sanctioned effective from 1-4-1969 and that the agreement is not implemented ;

(*b*) if so, what action Government propose to take againt the Corporation Bangalore for breach of this agreement ?

SRI H.C. SRIKANTAIAH (Minister for Municipal Administration).—

(*a*) Yes. Orders implementing the decission has been issued in Government Order No. HMA 174 MNU 77, dated 20-6-1978.

(*b*) Does not arise.

ಶ್ರೀ ಐ. ಪಿ. ಡಿ. ಸಾಲಪ್ಪ.—ಸ್ವಾಮಿ ೨೦-೬-೧೯೭೮ರಲ್ಲಿ ಪೌರ ಕಾರ್ಮಿಕರಿಗೆ ಪೆನ್‌ಷನ್ ಕೊಡ ಬೇಕು ಎಂದು ಆರ್ಡರ್ ಹೊರಡಿಸಿದ್ದೀರಿ, ಮಾನ್ಯ ಬಸವಲಿಂಗಪ್ಪನವರು ಪೌರಾಡಳಿತ ಮಂತ್ರಿಗಳಾಗಿ ದ್ದಾಗ ಇವರಿಗೆ ಟವಲ್, ಸೋಪು ಇತ್ಯಾದಿಗಳನ್ನು ಕೊಡಬೇಕು ಎಂದು ಆರ್ಡರ್ ಹೊರಡಿಸಿದ್ದರು. ಇದನ್ನು ಅಧಿಕಾರಿಗಳು ಹಾಗೆಯೇ ಇಟ್ಟುಬಿಟ್ಟಿದ್ದಾರೆ. ರಾಜ್ಯದಲ್ಲಿ ೨೩ಕ್ಕೂ ಮುನಿಸಿಪಾಲಿಟಿಗಳು ಇದ್ದು ಇವುಗಳ ಪೈಕಿ ೧೭೦ ಮುನಿಸಿಪಾಲಿಟಿಗಳು ಇದುವರೆಗೆ ಇವರಿಗೆ ಯಾವ ಸೌಲಭ್ಯಗಳನ್ನು ಕೊಟ್ಟಿಲ್ಲ. ಇವರನ್ನು ಖಾಯಂ ಕೆಲಸಗಾರರಾಗಿ ನೇಮಕ ಮಾಡಬೇಕು ಎಂದು ಕಾನೂನು ಇದ್ದರೂ ಸಹ ಇವರನ್ನು ಹಂಗಾಮಿಯಾಗಿ ಮುಂದುವರಿಸುತ್ತಿದ್ದಾರೆ. ಬೆಂಗಳೂರು ಸಿಟಿ ಕಾರ್ಪೊರೇಷನ್‌ನಲ್ಲಿಯೂ ಸಹ ಇವರಿಗೆ ಯಾವ ಸೌಲಭ್ಯಗಳನ್ನು ಕೊಟ್ಟಿಲ್ಲ. ಆರ್ಡರ್ ಹೋಗಿ ಒಂದುವರೆ ತಿಂಗಳಾದರೂ ಅದನ್ನು ಜಾರಿಗೆ ಕೊಟ್ಟಿಲ್ಲ. ಇದನ್ನು ಕಾರ್ಯರೂಪಕ್ಕೆ ತರುವ ವ್ಯವಸ್ಥೆ ಮಾಡುತ್ತೀರಾ ?

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಗವರ್ನ್‌ಮೆಂಟ್ ಆರ್ಡರ್‌ಗಳಲ್ಲಿ ಬೇರೆ ಬೇರೆ ಆರ್ಡರ್‌ಗಳು ಇಲ್ಲ. ಆರ್ಡರ್ ಹೊರಡಿಸಿದ ಮೇಲೆ ಅದನ್ನು ಇಂಪ್ಲಿಮೆಂಟ್ ಮಾಡಬೇಕು ೨೦-೬-೧೯೭೮ರಲ್ಲಿ ಆರ್ಡರ್ ಹೋಗಿದೆ. ಸಾವಿರಾರು ಜನ ಕಾರ್ಮಿಕರು ಇರುವಂಥ ಕಡೆಯಲ್ಲಿ ಅವರ ಸರ್ವೀಸ್ ವಿಚಾರಗಳನ್ನು ತಿಳಿದುಕೊಂಡು ಸೌಲಭ್ಯಗಳನ್ನು ಕೊಡಬೇಕಾಗುತ್ತದೆ, ಆದ್ದರಿಂದ ಸ್ವಲ ನಿಧಾನವಾಗಿದೆ. ಖಂಡಿತ ವಾಗಿಯೂ ಇವರಿಗೆ ಏನೇನು ಸೌಲಭ್ಯಗಳನ್ನು ಕೊಡಬೇಕು ಎಂದು ಮಾಡಿದ್ದೇವೆಯೋ ಅವುಗಳನ್ನು ಜಾಗ್ರತೆಯಾಗಿ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಇವರಿಗೆ ಪೆನ್‌ಷನ್ ಕೊಡಬೇಕು ಎಂದು ತೀರ್ಮಾನ ತೆಗೆದು ಕೊಂಡಿದ್ದು ಮಾನ್ಯ ಬಿ. ಎಂ. ಪಾಟೀಲರು ಪೌರಾಡಳಿತ ಸಚಿವರಾಗಿದ್ದಾಗ ಅಂದರೆ. ಸುಮಾರು ೧೦ ವರ್ಷಗಳ ಹಿಂದೆ. ಇವತ್ತಿನವರೆಗೂ ಈ ಆರ್ಡರನ್ನು ಜಾರಿಗೆ ಕೊಟ್ಟಿಲ್ಲ. ತಾವು ಇದರ ಬಗ್ಗೆ ಕ್ರಮ ತೆಗೆದುಕೊಂಡು ಸ್ವಾತಂತ್ರ್ಯ ದಿನಾಚರಣೆಯೆಂದು ಇವರಿಗೆ ಪೆನ್‌ಷನ್ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇದರ ಬಗ್ಗೆ ನಾವು ದಿನವನ್ನು ನಿಗಧಿ ಮಾಡುವುದಕ್ಕಾಗುವು ದಿಲ್ಲ. ಸಾವಿರಾರು ಜನ ಕಾರ್ಮಿಕರು ಇರುವಂಥ ಕಡೆಗಳಲ್ಲಿ ಇವರ ಸರ್ವೀಸ್ ರಿಜಿಸ್ಟ್ರಾರುಗಳನ್ನು ನೋಡ ಬೇಕಾಗುತ್ತದೆ. ಇದು ಅಷ್ಟು ಸುಲಭವಾಗಿ ಮಾಡತಕ್ಕ ಕೆಲಸವಲ್ಲ, ಆದಷ್ಟು ಜಾಗ್ರತೆಯಾಗಿ ಇವರಿಗೆ ಪೆನ್‌ಷನ್ ಕೊಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಇವರುಗಳು ಸರ್ವೀಸ್ ರಿಜಿಸ್ಟರ್‌ಗಳು ಸರಿಯಾಗಿಲ್ಲ. ಸುಳ್ಳು ದಾಖಲೆಗಳನ್ನು ಬರೆಯಲಾಗಿದೆ. ಕೆಲವು ಕಡೆಗಳಲ್ಲಿ ಇವರುಗಳ ಸರ್ವೀಸ್ ರಿಜಿಸ್ಟರುಗಳೇ ಇಲ್ಲ. ಆದ್ದ ರಿಂದ ಇಂಥ ಲೋಪಗಳು ಇರು ಇರುವಾಗ ಸರ್ಕಾರದವರು ಈ ಆಜ್ಞೆ ಮಾಡಿದರೂ ಏನು ಪ್ರಯೋಜನ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಸರ್ವೀಸ್ ರಿಜಿಸ್ಟರ್‌ಗಳಲ್ಲಿ ಅಧಿಕಾರಿಗಳು ತಪ್ಪು ಬರೆದಿದ್ದಾರೋ, ಅಥವಾ ಕಾರ್ಮಿಕರೇ ತಪ್ಪು ಅಂಕಿಅಂಶಗಳನ್ನು ಕೊಟ್ಟಿದ್ದಾರೋ ನಮ್ಮ ಮುಂದಿರುವ ಪ್ರಶ್ನೆ ಇದೆಲ್ಲ. ಒಟ್ಟಾರೆ, ಇದನ್ನೆಲ್ಲಾ ಸರಿಯಾಗಿ ನೋಡಿ ಅವರಿಗೆ ಪೆನ್‌ಷನ್ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಕಳೆದ ೧೦-೧೨ ವರ್ಷಗಳಿಂದ ಈ ದಾಖಲಾತಿಗಳನ್ನು ಸರಿದೂಡುವು ದಕ್ಕಾಗಿಲ್ಲ. ಇದನ್ನೆಲ್ಲಾ ಸರಿಪಡಿಸುವುದಕ್ಕೆ ಇನ್ನೂ ೧೦-೧೨ ವರ್ಷಗಳು ಬೇಕಾದರೆ ಇವರಿಗೆ ಪೆನ್‌ಷನ್ ಏನೂ ಇಲ್ಲ,

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಗಾಚ್ಯುಯಿಟಿ ಮತ್ತು ಪೆನ್‌ಷನ್‌ಗಳನ್ನು ಕೊಡಬೇಕಾದರೆ, ನಾವು ಈ ದಾಖಲಾತಿಗಳನ್ನೆಲ್ಲಾ ನೋಡಬೇಕಾಗುತ್ತದೆ. ಸರ್ವೀಸ್ ರಿಜಿಸ್ಟರ್ ಇಲ್ಲ ಎಂದರೆ, ಇದನ್ನು ಏನ್ನು ಯಾವ ರೀತಿಯಲ್ಲಿ ಕೊಡಬೇಕಾಗುತ್ತದೆ ಎನ್ನುವುದನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಯಾರು ಯಾರು ರಿಟೈರ್ ಆಗುತ್ತಾರೋ ಅವರಿಗೆ ಲಿಸ್ಟ್ ಮಾಡಿ, ಪೆನ್‌ಷನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿರಾ ?

ಶ್ರೀ ಡಿ. ದೇವರಾಜ ಅರಸ್.—ರಿಟೈರ್ ಆಗತಕ್ಕವರ ಲಿಸ್ಟನ್ನು ತಾವು ಕೊಡಿ ಅದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಪಿ. ರಾಮದೇವ್.—೧೯೭೧ರಲ್ಲಿ ವಿಶ್ರಾಂತಿ ವೇತನ ಕೊಡಬೇಕು ಎಂದು ತೀರ್ಮಾನ ಆಗಿದ್ದರೂ ಕೂಡ ಅನೇಕರು ವಿಶ್ರಾಂತಿ ವೇತನ ತೆಗೆದುಕೊಳ್ಳದೆ ಇಹಲೋಕವನ್ನು ಬಿಟ್ಟು ಹೋಗಿದ್ದಾರೆ. ದಯವಿಟ್ಟು ಈ ವಿಷಯದ ಬಗ್ಗೆ ತಾವು ಕ್ರಮ ತೆಗೆದುಕೊಂಡು ಇದಕ್ಕೆ ಒಂದು ಗಡುವು ನಿಗದಿ ಮಾಡಿ ವಿಶ್ರಾಂತಿ ವೇತನ ಕೊಡುವುದಕ್ಕೆ ತಾವು ಜವಾಬ್ದಾರಿ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇದರ ಬಗ್ಗೆ ೧೯೭೮ರಲ್ಲೆ ಆರ್ಡರ್ ಪಾಸ್ ಆಗಿದೆ. ಇದನ್ನು ೧-೯-೧೯೭೯ರಿಂದ ಕೊಡಬೇಕು ಎಂದು ಮಾಡಿದ್ದೇವೆ. ಇದರಲ್ಲಿ ತೊಂದರೆ ಏನೂ ಆಗುವುದಿಲ್ಲ.

## Establishment of High Court Bench at Belgaum Area

750. SRI G. K. TAKKAD (Parasagad).—Will the Minister for Law, Social Welfare and Backward Classes be pleased to State :—

(*a*) whether the Government intend to establish a Bench of High Court in order to provide facilities in the dispensation of justice to the people of Belgaum Division in Northern Karnataka ;

(*b*) whether the Government intend to establish a Bench in Belgaum, Belgaum is a Divisional Headqnarter and which is also having all facilities ;

(*c*) whether the Government have received representations from the public of the Belgaum District, in this behalf ; if so, whether the Government would take suitable action in this behalf ?

SRI L. G. HAVANUR (Minister for Law, Social Welfare and Backward Classes) —

(*a*) The question of establishing o perrnanent Bench of the High Court of Karnataka with jurisdiction over the northern districts of the State is under consideration of the Government.

(*b*) All factors will be taken into account before takings a decision in the matter.

(*c*) Representations have been received. They are being examined.

ಶ್ರೀ ಜಿ. ಕೆ. ತೆಕ್ಕೇಡ್.—ಸ್ವಾಮಿ ಹೈಕೋರ್ಟಿಗೆ ಬರುವ ಕೇಸುಗಳಲ್ಲಿ ಬೆಳಗಾಂ ಮತ್ತು ಗುಲ್ಬರ್ಗ ಜಿಲ್ಲೆಗಳ ಕೇಸುಗಳು ಹೆಚ್ಚು ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಲ್. ಜಿ. ಹಾವನೂರು.—ಈ ಬೇಡಿಕೆ ಎಲ್ಲಾ ಕಡೆಗಳಲ್ಲಿ ಬಂದಿದೆ.

ಶ್ರೀ ಜಿ ಕೆ. ತೆಕ್ಕೇಡ್.—ಬೆಂಗಳೂರು ಹೈಕೋರ್ಟಿಗೆ ಬರುವ ಕೇಸುಗಳಲ್ಲಿ ಬೆಳಗಾಂ ಮತ್ತು ಗುಲ್ಬರ್ಗ ಜಿಲ್ಲೆಗಳಿಗೆ ಸೇರಿದಂಥ ಕೇಸುಗಳು ಹೆಚ್ಚು ಎಂದು ಸರ್ಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಎಲ್. ಜಿ. ಹಾವನೂರು.—ಈ ಮಾಹಿತಿಗಾಗಿ ಹೈಕೋರ್ಟನ್ನು ನಾವು ಕೇಳಿದ್ದೇವೆ. ಇನ್ನೂ ಮಾಹಿತಿ ಬಂದಿಲ್ಲ.

ಶ್ರೀ ಜಿ. ಕೆ. ತೆಕ್ಕೇಡ್.—ವಿಶೇಷವಾಗಿ ಬೆಳಗಾಂ ವಿಭಾಗದ ಕೇಸುಗಳಲ್ಲಿ ಬೆಂಗಳೂರು ಹೈಕೋರ್ಟಿಗೆ ಬರತಕ್ಕವುಗಳು ಹೆಚ್ಚು ಎಂಬುದು ತಮ್ಮ ಅಭಿಪ್ರಾಯ ಏನು ಇದೆ ?

ಶ್ರೀ ಎಲ್. ಜಿ. ಹಾವನೂರು.—ಮಾನ್ಯ ಸದಸ್ಯರು ಯಾವುದೇ ಅಭಿಪ್ರಾಯವನ್ನು ಪಡಬಹುದು.